

ಬಾನಪ್ಪ ಕೆಲಸ ಮಾಡುತ್ತಿದ್ದಾಗ ತೇಗುತ್ತಾ ಬಂದ ಪರಿಚಯದವನೊಬ್ಬ ಅವನ ಕಿವಿಯಲ್ಲಿ ದುಗುಡದಿಂದ ಏನೋ ಉಸುರಿದ. ಬಾನಪ್ಪ ನಿಂತಲ್ಲೇ ಅದುರಿಹೋದ. ಜೋರಾಗಿ ಎದೆ ಬಡಿದುಕೊಳ್ಳುತ್ತ ಆ ಊರಿನ ಹಾಳುಗುಡಿಯತ್ತ ಓಡಿ ಹೊರಟ. ಯಾರಿಗೂ ಇವನೇಕೆ ಹೀಗಾಡುತ್ತಿದ್ದಾನೆ ಎಂದು ತಿಳಿಯುತ್ತಿಲ್ಲ. ಅವನು ಒಂದೇ ಸಮ 'ಅಯ್ಯೋ ಪಾಪಿ ದೇವ್ರೇ... ತಂಗೀ... ತಂಗೀ...' ಎನ್ನುತ್ತಾ ಅಳುತ್ತಾ, ಅರಚುತ್ತಾ ಓಡುತ್ತಿದ್ದಾನೆ. ಊರಿನ ಜನರಿಗೆ ಇವನ ಧ್ವನಿ, ಅದರಲ್ಲಿನ ಅಳಲು ಎಲ್ಲವೂ ಕೇಳಿಸುತ್ತಿತ್ತು. ಅವನು ಹೊಲೆಯನೆಂಬ ಒಂದೇ ಕಾರಣಕ್ಕೆ ಯಾರೂ ಅದನ್ನು ತಲೆಗೆ ಹಾಕಿಕೊಳ್ಳಲಿಲ್ಲ.

ಅಷ್ಟಕ್ಕೂ ಅಸಲಿಗೆ ರಂಗಮ್ಮನಿಗೆ ಆದದ್ದಾದರೂ ಏನು? ಪ್ರತೀ ದಿನದಂತೆ ಆ ಹುಡುಗಿ ಹೂವು ಹರಿದು ಮಾಲೆ ಕಟ್ಟಿ, ಪೇಟೆಗೆ ಹೋಗುವಂತೆಯೇ ಹೋಗಿದ್ದಾಳೆ. ಮರಳಿ ಬರುವಾಗ ಎಂದಿಗಿಂತ ಸ್ವಲ್ಪ ತಡವಾಗಿದೆ. ಅಂದರೆ ರಾತ್ರಿಯೇನಲ್ಲ; ಆದರೆ ಚೂರು ಚುರುಕು ಪಡೆದಂತಿತ್ತು. ಹೀಗೆ ಬರುವಾಗ ಅವಳ ದುರಂತಕ್ಕೆಂದೇ ಇರಬಹುದು, ಅಂದು ಆ ರಸ್ತೆ ನಿರ್ಜನವಾಗಿತ್ತು. ಹಿಂದೂ ಮುಂದೂ ಹೆಚ್ಚೂಕಡಿಮೆ ಮೈಲಿಗಾಗುವಷ್ಟು ದೂರವೂ ಜನರ ಸುಳಿವಿಲ್ಲ. ಆ ಹಾಳುಗುಡಿ ಅಡ್ಡರಸ್ತೆಯ ಹತ್ತಿರ ಯಾರೋ ಒಬ್ಬ ಗಂಡಸು ನಿಂತಿದ್ದ. ಈ ಒಬ್ಬಂಟಿ ಹುಡುಗಿಯನ್ನು ನೋಡುತ್ತಿದ್ದಂತೆ ಅವನು ವಿಚಲಿತನಾದ. ಕಾಮ ಕೆರಳಿತು. ಊರಲ್ಲಿ ಈ ಜಾತಿಯ ಜನರನ್ನು ನೋಡಲೂ ಅಸಹ್ಯ ಪಟ್ಟುಕೊಳ್ಳುತ್ತಿದ್ದ ಆ ಗಂಡಸಿಗೆ ರಂಗಮ್ಮನ ರೂಪು ನೋಡುತ್ತಾ ಆ ಪುಟ್ಟ ಹುಡುಗಿ ಬೇಕೆನಿಸಿತು. ಅವಳು ಮುಂದೆ ಸರಿದು ಹೋಗುತ್ತಿದ್ದಂತೆ ಅವಳ ಕೈ ಹಿಡಿದು ಜಗ್ಗಿದ. ಪಾಪ! ಅವಳು ಭಯಗೊಂಡಳು. ಎಷ್ಟೇ ಕೊಸರಿಕೊಂಡರೂ ಆ ಭದ್ರ ಬಾಹುಗಳು ಮತ್ತಷ್ಟು ಬಿಗಿಯಾಗಿ ಬಾಚಿಕೊಂಡವು. ಎತ್ತಿಕೊಂಡು ಹಾಳುಗುಡಿಯತ್ತ ಹೊರಟ. ಅವಳು ಕೈಬಿಡಿ ಎಂದು ಎಷ್ಟು ಗೋಗರೆದರೂ ಅವನು ಕರಗಲಿಲ್ಲ. ಯಾರಾದರೂ ಕಾಪಾಡಿ ಎನ್ನುವಂತೆ ಚೀರಿದಳು. ಆದರೆ ಅಲ್ಯಾರಿದ್ದಾರೆ? ಕಡೆ ಪಕ್ಷ ದೇವರು ಬಂದಾನೆಂಬಂತೆ ಅವನನ್ನೂ ಕೂಗಿದಳು. ಆದರೆ ಅವನು ಹಾಳುಗುಡಿಯಲ್ಲಿ ಶಾಂತವಾಗಿ 'ನನ್ನ ತಪಸ್ಸಿಗೆ ಯಾರೂ ಭಂಗ ತರಬೇಡಿ' ಎಂಬಂತೆ ಕುಳಿತಿದ್ದ. ಗಂಡಸು ಅವಳನ್ನು ಗುಡಿಯ ಮಧ್ಯ